**ಸಾಕ್ಷಿಯನ್ನು ದಿನಾಂಕಃ 27-06-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಪಿಜಿಜಿ ವಕೀಲರವರಿಂದಃ**

ನನಗೆ ಪ್ರತಿವಾದಿ ಕಳೆದ 8-10 ವರ್ಷಗಳಿಂದ ಪರಿಚಯ ಇರುವರು. ವಾದಿ ಹಾಗೂ ಪ್ರತಿವಾದಿಗಳು ಪತ್ರವನ್ನು ಬರೆಸಲು ನನ್ನ ಬಳಿ ಬರುತ್ತಿದ್ದ ಕಾರಣ ನನಗೆ ಅವರ ಪರಿಚಯ ಇರುವುದು. ನನ್ನ ಬಳಿ ಅವರು ಒಟ್ಟು ಎಷ್ಟು ಪತ್ರಗಳನ್ನು ಬರೆಸಿರುವರು ಎಂದು ನನಗೆ ಹೇಳಲಾಗುವುದಿಲ್ಲ. ಇತ್ತೀಚಿನ ದಿನಗಳಲ್ಲಿ ದಸ್ತಾವೇಜುಗಳನ್ನು ತಯಾರು ಮಾಡುವಾಗ ಸಂಬಂಧಿಸಿದ ವ್ಯಕ್ತಿಗಳ ಗುರುತನ್ನು ಖಾತ್ರಿ ಮಾಡಿಕೊಳ್ಳುತ್ತೇವೆ ಮತ್ತು ಗುರುತಿನ ಸಂಬಂಧ ದಾಖಲೆಗಳನ್ನು ಸಹ ಪಡೆದುಕೊಳ್ಳುತ್ತೇವೆ ಎಂದರೆ ಸರಿ. ಪ್ರತಿವಾದಿಯ ಆಧಾರ ಕಾರ್ಡ್ ನಂಬರ್ ಗೊತ್ತಿರುವುದಿಲ್ಲ. ನನ್ನ ಬಳಿ ದಸ್ತಾವೇಜು ಬರೆಸಲು ಬರುವ ವ್ಯಕ್ತಿಗಳ ಹೆಸರು ಹಾಗೂ ವಿಳಾಸಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ರಿಜಿಸ್ಟರ್ ನಿರ್ವಹಣೆ ಮಾಡುವುದಿಲ್ಲ. ನಾನು ದಸ್ತಾವೇಜು ಬರಹಗಾರನಾಗಿ ಕಳೆದ 2005-06 ರಿಂದ ಕೆಲಸ ಮಾಡುತ್ತಿದ್ದೇನೆ. ಯಾವುದೇ ಸ್ವರೂಪದ ಪತ್ರಗಳನ್ನು ಬರೆಯುವ ಕಾಲಕ್ಕೆ ನಾವು ಪಕ್ಷಕಾರರ ಹೆಸರು ವಿಳಾಸಕ್ಕೆ ಸಂಬಂಧಿಸಿದಂತೆ ಕಡ್ಡಾಯವಾಗಿ ರಿಜಿಸ್ಟರ್ ನಿರ್ವಹಿಸಬೇಕು ಎಂದರೆ ಸರಿಯಲ್ಲ.

ಸಿದ್ದಲಿಂಗಪ್ಪನನ್ನು ನನಗೆ ವಾದಿ ಪರಿಚಯಿಸಿ ಕೊಟ್ಟಿರುವನು. ನಾನು ಸಿದ್ದಲಿಂಗಪ್ಪನ ಪೋಟೋವನ್ನು ಪಡೆದಿರುವುದಿಲ್ಲ. ಹಳೇ ಬಸ್ ಸ್ಟಾಂಡಿನಲ್ಲಿರುವ ನಮ್ಮ ಕಛೇರಿಯಲ್ಲಿ ನಾನು ನಿಪಿ-4 ನ್ನು ಬರೆದಿರುತ್ತೇನೆ. ನಿಪಿ-4 ನ್ನು ಬರೆಯುವ ಕಾಲಕ್ಕೆ ನಾನು ಯಾವುದೇ ದಾಖಲೆಯನ್ನು ಪರಿಶೀಲನೆ ಮಾಡಿರುವುದಿಲ್ಲ. ಪಹಣಿಯನ್ನು ಕೂಡ ನಾನು ನೋಡಿರುವುದಿಲ್ಲ. ನಿಪಿ-4 ದಾಖಲೆಯನ್ನು ಪ್ರತಿವಾದಿ ಬರೆದುಕೊಟ್ಟಿರುವುದಿಲ್ಲ. ಅದನ್ನು ನಾವು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ-4 ದಾಖಲೆಯಲ್ಲಿ ಸಿದ್ದಲಿಂಗಪ್ಪ ಹೆಸರಿನ ಬದಿಯಲ್ಲಿ ಗುಣಾಕಾರ ಚಿಹ್ನೆ ಇದೆ ಎಂದರೆ ಸರಿ. ಅದನ್ನು ನಾನೇ ಹಾಕಿದ್ದೇನೆ. ಖಾಲಿ ದಾಖಲೆಗೆ ಗುಣಾಕಾರ ಚಿಹ್ನೆಯನ್ನು ನಾನು ಹಾಕಿದ್ದೇನೆ ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ಸಿದ್ದಲಿಂಗಪ್ಪನ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-4 ರಲ್ಲಿರುವ 4 ದಾಖಲೆಯಲ್ಲಿ ಒಕ್ಕಳೆಗಳನ್ನು ಬೇರೆ ಪೆನ್ನಿನಲ್ಲಿ ಬರೆಯಲಾಗಿದೆ ಮತ್ತು ಸಹಿಗಳನ್ನು ಬೇರೆ ಪೆನ್ನುಗಳಿಂದ ಹಾಕಲಾಗಿದೆ ಎಂದರೆ ಸರಿ.

ವಾದಿಯ ಮಾತು ಕೇಳಿಕೊಂಡು ನಿಪಿ-4 ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿ ರೂ.22,000/- ವಾದಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. 66 ಸೆಂಟ್ಸನ್ನು ವಾದಿ ಯಾವತ್ತೂ ಪ್ರತಿವಾದಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಪ್ರತಿವಾದಿಯ ಆಸ್ತಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**